

ಸ್ತನ ಕ್ಯಾನ್ಸರ್ ಒಂದು ಸಂಪೂರ್ಣ ಗುಣಮುಖರಾದ ಮೇಲೆ ಒಂದೆರಡು ವರ್ಷಗಳಲ್ಲೇ ಅದು ಮರುಕಳಿಸುವ ಸಾಧ್ಯತೆ ಇದೆ. ಮರುಕಳಿಕೆ ಗೊತ್ತಾದ ಕೂಡಲೇ ತಜ್ಞ ವೈದ್ಯರಿಂದ ಚಿಕಿತ್ಸೆ ಪಡೆದುಕೊಂಡರೆ ಅಪಾಯದ ಕುಣಿಕೆಯಿಂದ ಪಾರಾಗಬಹುದು.

■ ಉಮಾ ಅನಂತ್

# ಕ್ಯಾನ್ಸರ್ ಮರುಕಳಿಕೆ; ತಪ್ಪಿಸಬಹುದು ಕುಣಿಕೆ!

ಸ್ತನ ಕ್ಯಾನ್ಸರ್ ಚಿಕಿತ್ಸೆ ಪಡೆದ ನಂತರ ಕೆಲವರಿಗೆ ಇದೇ ಕಾಯಿಲೆ ಮರುಕಳಿಸುತ್ತದೆ. ಹೀಗೆ ಕ್ಯಾನ್ಸರ್ ಹಿಂತಿರುಗುವುದನ್ನು ಪುನರಾವರ್ತಿತ ಸ್ತನ ಕ್ಯಾನ್ಸರ್ ಎಂದು ಕರೆಯಲಾಗುತ್ತದೆ. ಮೊದಲ ಚಿಕಿತ್ಸೆಯ ನಂತರ ಸ್ತನ ಕ್ಯಾನ್ಸರ್ ತಿಂಗಳುಗಳು ಅಥವಾ ವರ್ಷಗಳ ನಂತರವೂ ಮರುಕಳಿಸಬಹುದು. ಕ್ಯಾನ್ಸರ್ ಅದೇ ಸ್ಥಳ ಅಥವಾ ದೇಹದ ಇತರ ಭಾಗಗಳಿಗೆ ಹಿಂತಿರುಗಬಹುದು.

ಒತ್ತಡಕ್ಕೆ ಒಳಗಾಗುವ ಮಹಿಳೆಯರಲ್ಲಿ ಸ್ತನ ಕ್ಯಾನ್ಸರ್ ಮರುಕಳಿಸುವ ಸಾಧ್ಯತೆ ಹೆಚ್ಚಾಗಿರುತ್ತದೆ. ಕ್ಯಾನ್ಸರ್ ಕಣಗಳು ಯಾವ ಭಾಗದಲ್ಲಿ ಮತ್ತೆ ಕಾಣಿಸಿಕೊಂಡಿದೆ, ಎಲ್ಲೆಲ್ಲ ಹರಡಿದೆ ಎಂಬುದರ ಪತ್ತೆಯಾದ ಬಳಿಕ ಟಾರ್ಗೆಟೆಡ್ ಥೆರಪಿ ನೀಡಲಾಗುತ್ತದೆ.

ಸ್ತನ ಕ್ಯಾನ್ಸರ್ ಮರುಕಳಿಸಿದರೆ ಹತಾಶೆ ಪಡುವ ಅಗತ್ಯವಿಲ್ಲ, ಸೂಕ್ತ ಚಿಕಿತ್ಸೆ ಪಡೆದರೆ, ಕಟ್ಟುನಿಟ್ಟಿನ ವ್ಯಾಯಾಮ, ಆಹಾರ ಪಥ್ಯ, ನಡಿಗೆ ಮಾಡಿದರೆ ಮರುಕಳಿಸಿದ ಕ್ಯಾನ್ಸರ್ ಕುಣಿಕೆಯಾಗಲಾರದು. ಎಲ್ಲರಂತೆ ಸುಗಮ ಜೀವನ ನಡೆಸಬಹುದು.

## ಸಂದರ್ಶನ



ಡಾ. ಶರದ್ ಎಂ. ತಂಗಾ, ಕ್ಯಾನ್ಸರ್ ಸರ್ಜನ್, ಕಲಬುರಗಿ

◆ **ಕ್ಯಾನ್ಸರ್, ಅದರಲ್ಲೂ ಸ್ತನ ಕ್ಯಾನ್ಸರ್ ಬಂದವರಿಗೆ ಗುಣಮುಖರಾದ ಬಳಿಕ ಮರುಕಳಿಕೆ ಆಗುತ್ತದೆ. ಹರ್ ಟು ಪಾಸಿಟಿವ್ (HER2 POSITIVE) ಎಂದು ಕರೆಯಲಾಗುವ ಈ ಸಮಸ್ಯೆಯ ಬಗ್ಗೆ ವಿವರ ನೀಡಿ.**

ದೇಹದ ಕೋಶಗಳು ಒಂದು ಉಪಯುಕ್ತ ಕಾರ್ಯವನ್ನು ನೆರವೇರಿಸಲು ನಿಯಂತ್ರಿತ ರೀತಿಯಲ್ಲಿ ಬೆಳೆಯುತ್ತವೆ ಮತ್ತು ವಿಭಜನೆಗೊಳ್ಳುತ್ತವೆ. ಈ ಪ್ರಕ್ರಿಯೆಯನ್ನು ಗ್ರೋತ್ ಫ್ಯಾಕ್ಟರ್ ರಿಸೆಪ್ಟರ್‌ಗಳು ಎಂಬ ವಿಶೇಷ ಪ್ರೊಟೀನ್‌ಗಳು ನಿಯಂತ್ರಿಸುತ್ತವೆ. ಇವು ಕೋಶಗಳ ಮೇಲ್ಮೈಯಲ್ಲಿ ಇರುತ್ತವೆ ಮತ್ತು ಕೋಶವು ಯಾವಾಗ ಬೆಳೆಯಬೇಕು ಎಂಬ ಸಂದೇಶಗಳನ್ನು ಸ್ವೀಕರಿಸುತ್ತವೆ. ಕೆಲವು ಸ್ತನ ಕ್ಯಾನ್ಸರ್‌ಗಳಲ್ಲಿ, ಹ್ಯೂಮನ್ ಎಪಿಡರ್ಮಲ್ ಗ್ರೋತ್ ಫ್ಯಾಕ್ಟರ್ ರಿಸೆಪ್ಟರ್ 2 (HER2) ಎಂಬ ಗ್ರಾಹಕ (ರಿಸೆಪ್ಟರ್) ಪ್ರಮಾಣ ಅತಿಯಾಗಿ ಹೆಚ್ಚಿರುತ್ತದೆ. ಹರ್ ಟು ಪ್ರಮಾಣ ಹೆಚ್ಚಾದಾಗ, ಕೋಶಗಳು ನಿರಂತರವಾಗಿ 'ಬೆಳೆಯಿರಿ ಮತ್ತು ವಿಭಜನೆಗೊಳ್ಳಿರಿ' ಎಂಬ ಸಂದೇಶಗಳನ್ನು ಪಡೆಯುತ್ತವೆ. ಇದರಿಂದ ಕೋಶಗಳು ಸಾಮಾನ್ಯಕ್ಕಿಂತ ವೇಗವಾಗಿ ಹೆಚ್ಚಾಗುತ್ತವೆ. ಇದರಿಂದ ಕ್ಯಾನ್ಸರ್ ಮರುಕಳಿಕೆಯಾಗುವ ಸಂಭವವಿದೆ.

◆ **ಹರ್ ಟು ಪಾಸಿಟಿವ್ ಕ್ಯಾನ್ಸರ್‌ಗೆ ಯಾವುದಾದರೂ ವಿಭಿನ್ನ ಲಕ್ಷಣಗಳಿವೆಯೇ?**

ಹಾಗೇನೂ ಇಲ್ಲ. ಇದು ಸ್ತನ ಕ್ಯಾನ್ಸರ್‌ನ ಸಾಮಾನ್ಯ